# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ:04–01–2021 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:–**

1. ಶ್ರೀ.ಹೆಚ್.ವಿ.ನರೇಂದ್ರ ಕುಮಾರ್, ADTP (North) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
2. ಶ್ರೀ.ಲಕ್ಷ್ಮಣಪ್ಪ, ಸಿ.ವಿ. ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಎಚ್.ಬಿ.ಆರ್ ಬಡಾವಣೆ.
3. ಶ್ರೀ. ಮೊಹಮ್ಮದ್ ಇಬ್ರಾಹಿಮ್, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ
4. ಶ್ರೀ.ರಾಕೇಶ್.ಎಸ್.ಜಿ, ವಾರ್ಡ್ ಸಮಿತಿಯ ಸದಸ್ಯರು.
5. ಶ್ರೀ ಶ್ರೀಕಾಂತ್ ಅಸೆಸರ್, ಕಂದಾಯ ಇಲಾಖೆ,
6. ಶ್ರೀಮತಿ.ಲತಾ ಗಣೇಶ್, ಸ್ಥಳೀಯರು
7. ಶ್ರೀ ಲಿಂಗರಾಜು, ಮಾರ್ಷಲ್,
8. ಶ್ರೀ.ಮದನ್ ಪ್ರಸಾದ್ ವಾರ್ಡ್ ಸಮಿತಿಯ ಸದಸ್ಯರು.
9. ಶ್ರೀಮತಿ. ಮೀನಾ.ಬಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾ–24
10. ಶ್ರೀ. ಪ್ರಸನ್ನ.ಎ.ಆರ್, ವಾರ್ಡ್ ಸಮಿತಿಯ ಸದಸ್ಯರು.
11. ಶ್ರೀ.ವಿಕ್ರಂ.ಎಂ.ವಿ, ಸ್ಥಳೀಯರು,
12. ಶ್ರೀ.ಯಾಸೀನ್, ಸ್ಥಳೀಯರು
13. ಶ್ರೀ.ಅಶೋಕ್, ಸ್ಥಳೀಯರು
14. ಶ್ರೀ.ಜೆ.ಅಲೆಕ್ಸಾಂಡರ್ ವಿಜಯ್ ಕುಮಾರ್, ಸ್ಥಳೀಯರು
15. ಶಶಿ ಕುಮಾರ್, ಸ್ಥಳೀಯರು
16. ಶ್ರೀ ಪ್ರತಾಪ್, ಸ್ಥಳೀಯರು,
17. ಶ್ರೀ.ರಮೇಶ್.ಎಂ, ಸ್ಥಳೀಯರು
18. ಶ್ರೀ ಪಿಚಾಂಡಿ, ಸ್ಥಳೀಯರು,
19. ಶ್ರೀ ನಾರಾಯಣಸ್ವಾಮಿ, ಸ್ಥಳೀಯರು,
20. ಶ್ರೀ.ಶ್ರೀನಿವಾಸ್, ಸ್ಥಳೀಯರು

ಹಿಂದಿನ ಸಮಿತಿ ಸಭೆಗೆ ಗೈರು ಹಾಜರಾಗಿದ್ದ ಎಚ್.ಬಿ.ಆರ್.ಆರ್.ಕ್ಷೇಮಾಭಿವೃದ್ಧಿ ಸಂಘದ ಹಿರಿಯ ಸದಸ್ಯರಾದ ಶ್ರೀ ಎಸ್.ಜೆ.ತೋಲ್ಪಾಡಿಯವರು ಎಚ್.ಬಿ.ಆರ್.ಆರ್ ಕ್ಷೇಮಾಭಿವೃದ್ಧಿಯ ಬಗ್ಗೆ ಹಾಗೂ ವಿಕ್ರಮ್, ಶ್ರೀನಿವಾಸ್ ಹಾಗೂ ಇನ್ನಿತರೆ ಪದಾಧಿಕಾರಿಗಳನ್ನು ಕಾರ್ಯದರ್ಶಿಯವರಿಗೆ ಹಾಗೂ ಕಾರ್ಯದರ್ಶಿರವರು ಸಭೆಗೆ ಮತ್ತೊಮ್ಮೆ ಪರಿಚಯಿಸಿಕೊಂಡರು.

ನಂತರ ಇಂದಿನ ಸಭೆಗೆ ಆಗಮಿಸಿದ್ದ ಸಮಿತಿಯ ಎಲ್ಲಾ ಸದಸ್ಯರನ್ನು ಇತರೆ ಇಲಾಖೆಗಳ ಅಧಿಕಾರಿಗಳನ್ನು, ಮತ್ತು ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿಯವರಾದ ಶ್ರೀ ಸಿ.ವಿ.ಲಕ್ಷ್ಮಣಪ್ಪ ರವರು ಆದರದ ಸ್ವಾಗತವನ್ನು ಕೋರುವ ಮುಖಾಂತರ ಸಭೆಯನ್ನು ಪ್ರಾರಂಭಿಸಲಾಯಿತು.

**ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಈ ಕೆಳಕಂಡ ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.**

ಸಮಸ್ಯೆ 1:– 14ನೇ ಮುಖ್ಯರಸ್ತೆಯಿಂದ 19ನೇ ಮುಖ್ಯರಸ್ತೆ, 5ನೇ ಬ್ಲಾಕ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಯವರು ಕುಡಿಯುವ ನೀರನ್ನು ದಿನಕ್ಕೆ ಮೂರು (03) ಬಾರಿ ಬಿಡುತ್ತಿರುವುದರಿಂದ ಈ ಬಾಗದ ನಿವಾಸಿಗಳಿಗೆ ಆಗುತ್ತಿರುವ ಅನಾನುಕೂಲದ ಬಗ್ಗೆ

ತೆಗೆದುಕೊಂಡ ಕ್ರಮ:– ಸಂಬಂದಪಟ್ಟ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯವರನ್ನು ತೆಗೆದುಕೊಂಡ ಕ್ರಮದ ಬಗ್ಗೆ ವಿವರಣೆಯನ್ನು ಕೇಳಿದಾಗ ಇಂದಿನ ಸಭೆಗೂ ಸಹಾ ಗೈರುಹಾಜರಾಗಿರುವುದು ಕಂಡು ಬಂತು. ಈ ಸಮಸ್ಯೆಯನ್ನು ಸಂಘದ ಪಧಾದಿಕಾರಿಗಳು ಇಲಾಖೆಯ **ಕಾರ್ಯಪಾಲಕ ಅಭಿಯಂತರರಾದ ಶ್ರೀ ಚಲಪತಿ ರವರಿಗೆ** ಹಾಗು ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಮತ್ತು ಸಹಾಯಕ ಅಭಿಯಂತರರ ಗಮನಕ್ಕೆ ತಂದರೂ ಸಹಾ ಸಮಸ್ಯೆ ಇನ್ನೂ

ಪರಿಹಾರವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇಲಾಖೆಯವರು ಸಭೆಗೂ ಹಾಜರಾಗದೇ ಸಾರ್ವಜನಿಕರಿಗೆ ಕುಡಿಯುವ ನೀರು ಇಲ್ಲದೇ ಉಂಟಾಗುತ್ತಿರುವ ಅನಾನುಕೂಲಗಳನ್ನು ಸರಿಪಡಿಸದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂದಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸುವ ಪತ್ರದ ಮುಖಾಂತರ ತಿಳಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಸಮಸ್ಯೆ 2:–** ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆ, ಕೆ.ಇ.ಬಿ ರಸ್ತೆ ಹಾಗೂ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕರು ಚರಂಡಿ ನೀರನ್ನು ಬೃಹತ್ ನೀರುಗಾಲುವೆಗೆ ಬಿಡುತ್ತಿರುವುದರಿಂದ ದುರ್ವಾಸನೆ ಬರುತ್ತಿದ್ದು, ಬೃಹತ್ ನೀರುಗಾಲುವೆ ಅಕ್ಕ ಪಕ್ಕದ ನಿವಾಸಿಗಳಿಗೆ ವಾಸನೆಯಿಂದ ತೊಂದರೆಯಾಗುತ್ತಿರುವುದನ್ನು ತಡೆಗಟ್ಟುವುದು ಮತ್ತು 18ನೇ ಮುಖ್ಯರಸ್ತೆಯಲ್ಲಿ ಚೇಂಬರ್ ಹಾಳಾಗಿದ್ದು, ಅದನ್ನು ಸರಿಪಡಿಸುವ ಬಗ್ಗೆ.

**ತೆಗೆದುಕೊಂಡ ಕ್ರಮ:–** ಈ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾಗಿರುವ ನಡಾವಳಿಗಳನ್ನು ಬೃಹತ್ ನೀರುಗಾಲುವೆ ಇಲಾಖೆಯವರಿಗೆ ಕಾರ್ಯದರ್ಶಿಯವರು ತಿಳಿಸದ್ದರೂ ಸಹಾ ಸರಿಪಡಿಸದೇ ಇರುವುದನ್ನು ಸಭೆಗೆ ತಿಳಿಸಿದರು.

ಈ ಕಲುಷಿತ ನೀರು ಕುಡಿಯುವ ನೀರಿನೊಂದಿಗೆ ಮಿಶ್ರಣವಾಗಿರುವುದರಿಂದ ಈ ಬಾಗದ ನಿವಾಸಿಗಳು ಅನಾರೋಗ್ಯದಿಂದ ಬಳಲುತಿರುವುದನ್ನು ಇಲಾಖೆಯ **ಸಹಾಯಕ ಅಭಿಯಂತರರಾದ ಶ್ರೀನಿವಾಸ್ (9980644355)** ಎಂಬುವರಿಗೆ ತಿಳಿಸಿದ್ದರೂ ಸಹಾ ಸರಿಪಡಿಸಿರುವುದಲ್ಲವೆಂದು ಸಂಘದ ಪಧಾದಿಕಾರಿಗಳು ಬೇಸರ ವ್ಯಕ್ತಪಡಿಸಿದರು.

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂದಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವಂತೆ ಎರಡನೇ ಪತ್ರದ ಮುಖಾಂತರ ತಿಳಿಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಸಮಸ್ಯೆ 3:–** ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಲು (ಎಲ್.ಇ.ಡಿ) ಹಾಗೂ ಚಿಲ್ಡ್ರನ್ ಪಾರ್ಕ್‌ನಲ್ಲಿ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ .

**ತೆಗೆದುಕೊಂಡ ಕ್ರಮ:–** ಈಗಾಗಲೇ ಅಳವಡಿಸಿ ಕ್ರಮೇಣ ಹಾಳಾಗಿರುವ (ಎಲ್.ಇ.ಡಿ) ಬೀದಿ ದೀಪಗಳ ಬದಲಾಗಿ ಹೊಸ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಬೆಸ್ಕಾಂ ಇಲಾಖೆಯವರಿಗೆ ತಿಳಿಸಿದಾಗ ಹೊಸದಾಗಿ ಅಳವಡಿಸಲು ಅನುದಾನ ಲಬ್ಯವಿಲ್ಲವೆಂದು ಇದನ್ನು ಶಾಸಕರ ಅನುಧಾನದಲ್ಲಿ ಇಲಾಖೆಯವರು ತಿಳಿಸಿರುತ್ತಾರೆಂದು ಸಂಘದ ಪಧಾದಿಕಾರಿಗಳು ಸಭೆಗೆ ತಿಳಿಸಿದರು.

**ಎಲ್ಲೆಲ್ಲಿ ಬೀದಿ ದೀಪಗಳಿಲ್ಲ ಎಂಬ ಪಟ್ಟಿಯನ್ನು ತಿಳಿದರೆ ಆ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದಕ್ಕೆ ಅಥವಾ ರಿಪೇರಿ ಮಾಡಿಸುವುದಕ್ಕೆ ಸೂಕ್ತ ಕ್ರಮವಹಿಸುವುದಾಗಿ ಕಾರ್ಯದರ್ಶಿವರು ಸಭೆಗೆ ತಿಳಿಸಿದರು.**

**ಸಮಸ್ಯೆ 4:–** ವಾರ್ಡ್ ವ್ಯಾಪ್ತಿಯಲ್ಲಿ ಚಿಕನ್ ಮತ್ತು ಮಟನ್ ಅಂಗಡಿ ಮಾಲೀಕರು ತಮ್ಮ ತಮ್ಮ ಅಂಗಡಿ ತ್ಯಾಜ್ಯವನ್ನು ಬೃಹತ್ ನೀರುಗಾಲುವೆಗೆ ಸುರಿಯುತ್ತಿರುವುದರಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಚರಂಡಿಯ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.

**ತೆಗೆದುಕೊಂಡ ಕ್ರಮ:–** ಈ ಸಮಸ್ಯೆಯನ್ನು ಪರಿಹರಿಸುವಂತೆ ಪಶುಸಂಗೋಪನಾ ಇಲಾಖೆಯವರಿಗೆ ತಿಳಿಸಿದ್ದರೂ ಸಹಾ ಸರಿಪಡಿಸಿರುವುದಿಲ್ಲವೆಂದು ಸಂಘದ ಪಧಾದಿಕಾರಿಗಳು ಸಭೆಗೆ ತಿಳಿಸಿ ಇಂದಿನ ಸಭೆಯಲ್ಲಿ ಈ ಇಲಾಖೆಯವರು ಗೈರುಹಾಜರಾಗಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂದಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವಂತೆ ಎರಡನೇ ಪತ್ರದ ಮುಖಾಂತರ ತಿಳಿಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಸಮಸ್ಯೆ 5:–** ಕೆ.ಪಿ.ಟಿ.ಸಿ.ಎಲ್ ನವರು ನಿರ್ಮಿಸುತ್ತಿರುವ 220 ಕಿ ವ್ಯಾಟಿನ ಕೇಬಲ್ಲನ್ನು ಅಳವಡಿಸಲು ಎಲ್.& ಟಿ ರವರು ಸೆಪ್ಟೆಂಬರ್ 2020 ರಲ್ಲಿ ಅಗೆದಿರುವ ರಸ್ತೆ ಬಾಗವನ್ನು ಸರಿಪಡಿಸುವ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮ್ಯಾನ್ ಹೋಲ್ ಗಳನ್ನು ಸರಿಪಡಿಸುವ ಬಗ್ಗೆ ಸಂಘದ ಪಧಾದಿಕಾರಿಯವರಾದ ಶ್ರೀನಿವಾಸ್‌ರವರು ಪ್ರಸ್ತಾಪಿಸಿರುವ ಬಗ್ಗೆ.

**ತೆಗೆದುಕೊಂಡ ಕ್ರಮ:–** ಕೆ.ಪಿ.ಟಿ.ಸಿ.ಎಲ್ ನವರು ಈ ರಸ್ತೆಗಳನ್ನು ಸರಿಪಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಣ ಪಾವತಿರುವ ಬಗ್ಗೆ ಇರುವ ಫೈಲನ್ನು ಪಡೆದು ಇದನ್ನು ತುರ್ತಾಗಿ ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುವುದಾಗಿ ಕಾಮಗಾರಿ ಇಲಾಖೆಯವರು (ಕಾರ್ಯದರ್ಶಿ) ಸಭೆಗೆ ತಿಳಿಸಿದರು.

---

ಈ ಹಂತದಲ್ಲಿ ಹೊಸ ವರ್ಷ ಪ್ರಾರಂಭವಾಗಿರುವುದರಿಂದ ಸಂಘದ ಹಿರಿಯರಾದ ಶ್ರೀ ಎಸ್.ಜಿ.ತೋಲ್ಪಾಡಿ ರವರು ಎಲ್ಲರಿಗೆ ಹೊಸ ವರ್ಷದ ಶುಭ ಕಾಮನೆಗಳನ್ನು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ಹೊಸ ಸಮಸ್ಯೆಗಳನ್ನು ಸಮಿತಿಯ ಮುಂದೆ ಮಂಡಿಸಲು ಸಮಿತಿಯ ಕಾರ್ಯದರ್ಶಿರವರು ಸಾರ್ವಜನಿಕರಲ್ಲಿ ಕೋರಿದರು.

ಈ ಸಮಯದಲ್ಲಿ ಸಂಚಾರಿ ದಟ್ಟಣೆ ಹೆಚ್ಚಾಗಿದ್ದರೂ ಸಹಾ ಸದರಿ ಸಭೆಗೆ ಹಾಜರಾಗಿದ್ದ ಸಂಚಾರಿ ಇಲಾಖೆಯ ಸಿಬ್ಬಂದಿಯವರನ್ನು ಸಂಘದ ಪಧಾದಿಕಾರಿಗಳು ಪ್ರಶಂಸಿಸಿ ಸಿಬ್ಬಂದಿಯನ್ನು ಕರ್ತವ್ಯಕ್ಕೆ ಕಳುಹಿಸುವ ದೃಷ್ಟಿಯಿಂದ ಮೊದಲು ಸಂಚಾರಿ ಇಲಾಖೆಗೆ ಸಂಬಂದಿಸಿದ ಸಮಸ್ಯೆಗಳನ್ನು ಮೊದಲು ಸಭೆಗೆ ತಿಳಿಸಲು ಸಮಿತಿಯ ಸದಸ್ಯರಾದ ಶ್ರೀ ಮದನ್ ಪ್ರಸಾದ್ ರವರು ಕೋರಿದರು.

ಮಸ್ಯೆ 1 :– ಹೆಣ್ಣೂರು ಮೇಲ್ಸೇತುವೆ ಮಾಸ್ಕೂಲ್ ಹತ್ತಿರ ಗ್ಯಾರೇಜ್ ಏರಿಯಾದಲ್ಲಿ 2ವೇ ಇದ್ದ ಸರ್ವೀಸ್ ರಸ್ತೆಯನ್ನು 1ವೇ ಮಾಡಿರುವುದನ್ನು ತೆರವುಗೊಳಿಸಿ 2ವೇ ಮಾಡುವಂತೆ ಮದನ್ ಪ್ರಸಾದ್ ತಿಳಿಸಿದರು. ಹಾಗೆಯೇ

**ಸಮಸ್ಯೆ 2 :–** ವಾರ್ಡ್ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗಗಳ ಮೇಲೆ ಅನೇಕ ಹಳೇ ವಾಹನಗಳ ಅವಶೇಷಗಳು ಬಿದ್ದಿದ್ದು ಸಾರ್ವಜನಿಕರ ಓಡಾಟಕ್ಕೆ ಅಡಚಣೆ ಉಂಟಾಗುವುದಲ್ಲದೇ ಪರಿಸರ ಹಾಳಾಗಿ ಸ್ವಚ್ಛತೆ ಇಲ್ಲದಂತಾಗಿರುವುದರಿಂದ ತಕ್ಷಣ ಈ ವಾಹನಗಳ ಅವಶೇಷಗಳನ್ನು ತೆರವುಗೊಳಸುವಂತೆ ಸಂಚಾರಿ ಇಲಾಖೆಯಿಂದ ಹಾಜರಾಗಿದ್ದ ಶ್ರೀ ಲಿಂಗರಾಜು (9663533456) ರವರಿಗೆ ತಿಳಿಸಲಾಯಿತು.

ಸಮಸ್ಯೆ 3 :– ಟ್ರಾಫಿಕ್ ಸಿಗ್ನಲ್ ಗಳನ್ನು ಬಿ.ಡಿ.ಎ.ಕಾಂಪ್ಲೆಷ್ ಹತ್ತಿರ ಮತ್ತು ಪೆಟ್ರೋಲ್ ಬಂಕ್ ಹತ್ತಿರ ಅಳವಡಿಸುವುದಕ್ಕೆ ಕೆ.ಜಿ.ಹಳ್ಳಿ ಪೋಲೀಸ್ ಸ್ಟೇಷನ್ ನಿಂದ ಮಂಜೂರಾಗಿರುವ ಬಗ್ಗೆ ತಿಳಿದು ಬಂದಿದೆಯೆಂದು ಮದನ್ ಪ್ರಸಾದ್ ರವರು ತಿಳಿಸಿದರು.

**ಸಮಸ್ಯೆ 4:–** ಮೇಲ್ಸೇತುವೆ ಮೇಲೆ ಅತಿ ಹೆಚ್ಚು ಭಾರವಿರುವ ಲಾರಿಗಳು ನಿಲ್ಲಿಸುವುದರಿಂದ ಮೇಲ್ಸೇತುವೆಗೆ ಅಪಾಯವಾಗಬಹುದೆಂದು ಇದನ್ನು ತಪ್ಪಿಸಲು ಕ್ರಮವಹಿಸುವಂತೆ ಸಂಘದ ಪಧಾದಿಕಾರಿಗಳು ಸಂಚಾರಿ ಇಲಾಖೆಯವರಿಗೆ ತಿಳಿಸಿದರು.

ತೆಗೆದುಕೊಳ್ಳುವ ಕ್ರಮದ ಬಗ್ಗೆ :– ಸಂಚಾರಿ ಇಲಾಖೆಯಿಂದ ಹಾಜರಾಗಿದ್ದ ಶ್ರೀ ಲಿಂಗರಾಜು ರವರು ಹೊಸದಾಗಿ ಟೈಗರ್ ಬಂದಿರುವುದರಿಂದ ಹಳೇ ವಾಹನಗಳನ್ನು ತುರ್ತಾಗಿ ತೆರವುಗೊಳಿಸಲು ಹಾಗೂ ಮೇಲ್ಸೇತುವೆ ಮೇಲೆ ಅತಿ ಹೆಚ್ಚು ಭಾರವಿರುವ ಲಾರಿಗಳು ನಿಲ್ಲಿಸುವುದನ್ನು ತಪ್ಪಿಸಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

**ಸಮಸ್ಯೆ 5 :–** ಶ್ರೀ ಗಂಗಾದರ್ ರವರು ಹೆಣ್ಣೂರು ಗ್ರಾಮದಲ್ಲಿ ಕುಡಿಯುವ ನೀರಿಗೆ ಉಂಟಾಗಿರುವ ಅನಾನುಕೂಲವನ್ನು ಸರಿಪಡಿಸುವಂತೆ ಕೋರಿದರು. ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಲು ಮತ್ತು ಶಾಲೆಯನ್ನು ಸ್ಯಾನಿಟೈಸ್ ಮಾಡಲು, ಚಿಕ್ಕಣ್ಣ ಲೇಔಟ್ ನಲ್ಲಿ ಬೋರ್‌ವೆಲ್ ಪೈಪ್‌ನ್ನು ಸರಿಪಡಿಸುವ ಬಗ್ಗೆ, ಒಂಟಿ ಮನೆ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದ್ದಲ್ಲದೇ ಸಭೆಯನ್ನು ಶಿಸ್ತುಬದ್ಧವಾಗಿ ನೆಡೆಸಲು ಎಲ್ಲರನ್ನು ಮನವಿ ಮಾಡಿದರು.

**ಸಮಸ್ಯೆ 6 :–** ವಾರ್ಡ್ ವ್ಯಾಪ್ತಿಯ ರಾಮಚಂದ್ರಪುರದ ನಿವಾಸಿಗಳಾದ 1) ಶ್ರೀಮತಿ ಜ್ಞಾನಮಣಿ ಕೋಂ ಏಸು ನಂ 133, ಕರಿಯಣ್ಣ ಪಾಳ್ಯ ಮತ್ತು 2) ಶ್ರೀಮತಿ ಕೆ.ಎಸ್.ಈಶ್ವರಿ ಕೋಂ ರವಿಚಂದ್ರ ಬಿ. ನಂ 67/2,7ನೇ ಮುಖ್ಯ ರಸ್ತೆ,ರಾಮಚಂದ್ರ ಬಡಾವಣೆ ಇವರಿಗೆ 2016–17ನೇ ಸಾಲಿನ ಪಿ ಕೋಡ್ ಸಂಖ್ಯೆ 2340 ಲೆಕ್ಕಶೀರ್ಷಿಕೆಯಲ್ಲಿ ವೈಯುಕ್ತಿಕ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳು 024–17–000067 ಮತ್ತು 024–17–000069 ಕಾಮಗಾರಿ ಸಂಕೇತಗಳೊಂದಿಗೆ ತಲಾ ರೂ 4.00 ಲಕ್ಷಗಳಂತೆ ಒಟ್ಟು 8.00 ಲಕ್ಷಗಳು ಮಂಜೂರಾಗಿದ್ದು ಇವರು ಈಗಾಗಲೇ ಮನೆಗಳನ್ನು ನಿರ್ಮಿಸಿಕೊಂಡಿದ್ದು ಸದರಿಯರಿಗೆ ಬಿಲ್ ಪಾವತಿಯಾಗದೇ ತೊಂದರೆಯಾಗಿರುವುದರಿಂದ ಇವರಿಗೆ ತುರ್ತಾಗಿ ಬಿಲ್ ಪಾವತಿ ಮಾಡಲು ಕ್ರಮವಹಿಸುವಂತೆ ಸಮಿತಿಯ ಸದಸ್ಯರು ತೀರ್ಮಾನಿಸಿದರು.

**ಸದರಿ ಸಮಸ್ಯೆಯನ್ನು ನೋಡಲ್ ಅಧಿಕಾರಿಯವರ ಆದೇಶದಂತೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.**

ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾದ ಮೇಲಿನ ಎಲ್ಲಾ ಸಾರ್ವಜನಿಕ ಸಮಸ್ಯೆಗಳನ್ನು ಸಂಬಂದಪಟ್ಟ ಇಲಾಖೆಯವರು ತುರ್ತು ಕ್ರಮವಹಿಸುವಂತೆ ತಿಳಿಸುವುದಲ್ಲದೇ ಎಲ್ಲಾ ಇಲಾಖೆಯ ಅಧಿಕಾರಿಗಳು/ನೌಕರರು ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಸಮಿತಿಯ ವ್ಯಾಟ್ಸ್‌ಪ್ ಗ್ರೂಪಿನಲ್ಲಿ ಮಾನ್ಯ ನೋಡಲ್ ಅಧಿಕಾರಿಯವರು ಮತ್ತು ಕಾರ್ಯದರ್ಶಿರವರು ಹಾಕುವುದನ್ನೇ ಅಧಿಕೃತವೆಂದು ಪರಿಗಣಿಸಿ ತಪ್ಪದೇ ಹಾಜರಾಗುವಂತೆ ಸಭೆಯಲ್ಲಿ ತೀರ್ಮಾನಿಸಿ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

4/1/21
ಸಿ.ವಿ.ಲಕ್ಷ್ಮಣಪ್ಪ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಲೇಔಟ್

04/01/2021
(ಹೆಚ್.ವಿ.ನರೇಂದ್ರ ಕುಮಾರ್)
ಸಹಾಯಕ ನಿರ್ದೇಶಕರು, ನಗರ ಯೋಜನೆ (ಉತ್ತರ)
ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ.24

<u>ಪ್ರತಿಯನ್ನು:</u>

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೇಜರ್‌ಟೌನ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೂರ್ವ) ರಸ್ತೆ ಮೂಲಭೂತ ಸೌಕರ್ಯ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಪೊಲೀಸ್ ಇನ್ಸ್‌ಪೆಕ್ಟರ್, (ಸಂಚಾರ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಪೊಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಕಲ್ಯಾಣ ಇಲಾಖೆ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಪಶು ಸಂಗೋಪನಾ ಇಲಾಖೆ, (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಕಛೇರಿ ಕಡತಕ್ಕೆ.